/

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕನ್ನಡ ಕಾಯಕ ವರ್ಷ 2020-21

ಸಂಖ್ಯೆ: ಕಾಶಿಇ/155/ಸುತ್ತೋಲೆ/2021-22/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.10.2021.

**ಸುತ್ತೋಲೆ**

ವಿಷಯ: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸೇವಾ ವಿಷಯಗಳ ಇತ್ಯರ್ಥ ಕುರಿತು.

******

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ (i) ಸೇವಾ ಪೂರ್ವ ಅವಧಿ, (ii) ವೇತನ ನಿಗದೀಕರಣ, (iii) ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ, (iV) ಸ್ಥಾನೀಕರಣ ಸೌಲಭ್ಯ, (V) ಬೋಧಕೇತರ ಸಿಬ್ಬಂದಿಗಳಿಗೆ ಟಿ.ಬಿ.ಎ/ಟಿ.ಬಿ.ಪಿ/ಹೆಚ್ಚುವರಿ ವೇತನ ಬಡ್ತಿ ಸೌಲಭ್ಯ, ವೇತನ, ರಜೆ, (Vi) ಪಿಂಚಣಿ ಮುಂತಾದ ವಿಷಯಗಳ ಕುರಿತು ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿನ ಪ್ರಾಂಶುಪಾಲರೊಂದಿಗೆ ಸದರಿ ಸೇವಾ ವಿಷಯಗಳ ಬಗ್ಗೆ ಪ್ರತಿ ತಿಂಗಳ 02ನೇ ಮತ್ತು 15ನೇ ತಾರೀಖುಗಳಂದು Virtual ಸಭೆ ಕರೆದು ಮಾಹಿತಿ ಪಡೆದು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ ಹಾಗೂ ಸದರಿ ವಿಷಯಗಳ ಬಗ್ಗೆ ನ್ಯೂನ್ಯತೆಗಳಿದ್ದಲ್ಲಿ ಅವುಗಳ ಕುರಿತು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರೊಂದಿಗೆ ಪ್ರತಿ ತಿಂಗಳ 03ನೇ ಮತ್ತು 17ನೇ ತಾರೀಖುಗಳಂದು ಸೂಕ್ತ ದಾಖಲೆಗಳೊಂದಿಗೆ Virtual ಸಭೆಗೆ ಹಾಜರಾಗಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಬೆಂಗಳೂರು,ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಎಲ್ಲಾ ಜಿಲ್ಲಾ ಲೀಡ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ಮೇಲಿನ ದಿನಾಂಕಗಳಂದು ಪ್ರಾದೇಶಿಕ ಜಂಟಿ ನಿರ್ದೇಶಕರು ಆಯೋಜಿಸುವ ಸಭೆಗೆ ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸೇವಾ ಸೌಲಭ್ಯಗಳ ಕುರಿತಾದ ಪ್ರಕರಣಗಳಿದ್ದಲ್ಲಿ ಅವುಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮದ ಕುರಿತು ಅಗತ್ಯ ದಾಖಲೆಗಳೊಂದಿಗೆ ಒದಗಿಸಲು ಸೂಚಿಸಿದೆ.
4) ಕೇಂದ್ರ ಕಛೇರಿಯ ಸಂಬಂಧಪಟ್ಟ ಆಡಳಿತ ಶಾಖೆಯ ಮ್ಯಾನೇಜರ್/ಅಧೀಕ್ಷಕರುಗಳಿಗೆ-ಮಾಹಿತಿ ಹಾಗೂ ತಮ್ಮ ಶಾಖೆಯಲ್ಲಿ ನಿರ್ವಹಿಸುವ ವಿಷಯಗಳ ಕುರಿತಂತೆ ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳ 03ನೇ ಮತ್ತು 17ನೇ ತಾರೀಖುಗಳಂದು ನಡೆಯುವ ಸಭೆಗೆ ಹಾಜರಾಗಿ ತಮ್ಮ ಶಾಖೆಗೆ ಸಂಬಂಧಿಸಿದ ವಿಷಯದ ಕುರಿತು ಕ್ರಮವಹಿಸಲು ಸೂಚಿಸಿದೆ.
5) ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ.

ಪ್ರತಿಯನ್ನು:

1) ಮಾನ್ಯ ಆಯುಕ್ತರು/ನಿರ್ದೇಶಕರು/ಹೆಚ್ಚುವರಿ ನಿದೇಶಕರ ಆಪ್ತ ಶಾಖೆಗಳಿಗೆ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು.
2) ಕಛೇರಿ ಪ್ರತಿ.